


International Journal of Kannada Research
www.kannadajournal.com

ISSN: 2454–5813
IJKR 2025; 11(3): 151-153
© 2025 IJKR
www.kannadajournal.com
Received: 01-05-2025
Accepted: 05-06-2025

**ಡಾ. ಎಸ್. ಸಿದ್ದೇಗೌಡ**
ಕನ್ನಡ ಸಹ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು (ಸ್ವಾಯತ್ತ), ಮೈಸೂರು, ಕರ್ನಾಟಕ, ಭಾರತ

**ನಟರಾಜ್ ಕಾಳೇಗೌಡ**
ಸಸ್ಯಶಾಸ್ತ್ರ ಸಹ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು (ಸ್ವಾಯತ್ತ), ಮೈಸೂರು, ಕರ್ನಾಟಕ, ಭಾರತ

# ಗಮಕ: ವ್ಯಾಖ್ಯಾನಕಾರನಿಗಿರಬೇಕಾದ ಗುಣ ಲಕ್ಷಣಗಳು

**ಎಸ್. ಸಿದ್ದೇಗೌಡ, ನಟರಾಜ್ ಕಾಳೇಗೌಡ**

**DOI:** https://www.doi.org/10.22271/24545813.2025.v11.i3c.1161

**ಪೀಠಿಕೆ**

ಸಾಹಿತ್ಯ, ಸಂಗೀತ ಮಿಶ್ರಿತವಾದ ಗಮಕ ಕಲೆಯು ಬಹು ಪ್ರಾಚೀನವಾದುದು. ಅರವತ್ತನಾಲ್ಕು ಕಲೆಗಳಲ್ಲಿ ಗಮಕ ಕಲೆಯೂ ಒಂದು ಎಂಬುದು ವಿದ್ವಾಂಸರ ಅಭಿಪ್ರಾಯ. ರಾಜಾಶ್ರಯವನ್ನು, ರಾಜಮನ್ನಣೆಯನ್ನು ಪಡೆದಿದ್ದ ಕೆಲವು ಕಲೆಗಳು ಇಂದು ಕಾಲಗರ್ಭದಲ್ಲಿ ಹುದುಗಿ ಹೋಗುತ್ತಿವೆ. ಇಂಥವುಗಳಲ್ಲಿ ಗಮಕ ಕಲೆಯೂ ಒಂದು. ಕನ್ನಡ ನಾಡಿನಲ್ಲಿ ಕ್ರಿ.ಶ.ದ ಆರಂಭದಿಂದಲೂ ಗಮಕಿಗಳು ಇದ್ದರು ಎಂಬುದಕ್ಕೆ ಆಧಾರಗಳಿವೆ. ಕನ್ನಡ ಶಾಸನಗಳಲ್ಲಿ, ಅನೇಕ ಕವಿಗಳ ಕಾವ್ಯಗಳಲ್ಲಿ ಗಮಕದ ಪ್ರಸ್ತಾಪ ಬಂದಿದೆ. ಪ್ರಾಚೀನ ಕಾಲದಲ್ಲಿ ಕವಿ, ವಾದಿ, ವಾಗ್ಮಿಗಳ ಸಾಲಿನಲ್ಲಿ ಗಮಕಿಯೂ ಸಮಾನ ಮನ್ನಣೆ ಪಡೆಯುತ್ತಿದ್ದನು. ವಿದ್ವಾಂಸರನ್ನು ಆಸ್ಥಾನದಲ್ಲಿಟ್ಟುಕೊಂಡು ಅವರ ಮೂಲಕ ಸಾಹಿತ್ಯ, ಸಂಗೀತಕ್ಕೆ ಪ್ರೋತ್ಸಾಹ ಕೊಡುವುದು ರಾಜರುಗಳಿಗೆ ಹೆಮ್ಮೆಯ ವಿಷಯವಾಗಿತ್ತು. 'ರಾಜರುಗಳಿಂದ ಕವಿಗಳು ಪ್ರಸಿದ್ಧಿ ಹೊಂದಿದರು, ಕವಿಗಳಿಂದ ರಾಜರು ಪ್ರಸಿದ್ಧಿಯಾದರು' ಎಂಬುದು ಪ್ರಸಿದ್ಧವಾದ ಮಾತು. ಕನ್ನಡ ನಾಡಿನ ಕೊನೆಯ ದೊರೆಯಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ವರೆಗೂ ಈ ಪರಂಪರೆ ಬೆಳೆದು ಬಂದಿದೆ. ಇವರ ಆಶ್ರಯದಲ್ಲಿದ್ದ ಅಭಿನವ ಕಾಳಿದಾಸ ಎಂದು ಕರೆಸಿಕೊಂಡ ಬಸವಪ್ಪ ಶಾಸ್ತ್ರಿಗಳು ಕವಿಯೂ ಹೌದು, ಗಮಕಿಯೂ ಹೌದು. ಹೀಗೆ ಗಮಕ ಕಲೆಯನ್ನು ಉಳಿಸಿ ಬೆಳೆಸಿದವರಲ್ಲಿ, ತನ್ಮೂಲಕ ಕನ್ನಡ ಕಾವ್ಯಗಳು ಜನಮನವನ್ನು ಮುಟ್ಟುವಲ್ಲಿ ರಾಜರುಗಳ ಪಾತ್ರ ಪ್ರಮುಖವಾದುದು.

ಗಮಕ ಕಲೆಯು ಸಾಹಿತ್ಯ ಪ್ರಧಾನವಾದುದು. ಪದ್ಯದ ರಸಭಾವಗಳಿಗೆ ತಕ್ಕಂತೆ ಸಂದರ್ಭೋಚಿತವಾಗಿ ರಾಗಗಳನ್ನಳವಡಿಸಿಕೊಂಡು ಹಿತ ಮಿತ ರಾಗ ಸಂಯೋಜನೆಯಿಂದ ಕಾವ್ಯವಾಚನ ಮಾಡುವ ಕಲಾವಿದನನ್ನು ಗಮಕಿ ಎನ್ನುತ್ತಾರೆ. ಓದು ಬಲ್ಲವನೊಬ್ಬನು ಮೌನವಾಗಿ ಒಂದು ಕಾವ್ಯವನ್ನು ಓದಿ ಆನಂದ ಪಡುವುದಕ್ಕಿಂತಲೂ, ಅದೇ ಕಾವ್ಯವನ್ನು ಒಬ್ಬ ಉತ್ತಮ ಗಮಕಿಯ ವಾಚನದಿಂದ ಕೇಳಿದರೆ ತನ್ನ ಓದಿಗಿಂತಲೂ ಮಿಗಿಲಾದ ಆನಂದವನ್ನು ಅನುಭವಿಸುತ್ತಾನೆಂಬುದು ಎಲ್ಲರ ಅಭಿಪ್ರಾಯ. ಪದ್ಯಗಳ ನಾದ ಮೊದಲು ಹೃದಯವನ್ನು ತಟ್ಟುತ್ತದೆ. ರಾಗ ಸಂಚಾರದ ಗಮಕದಿಂದ ಒಂದು ನೂತನ ಲೋಕವೇ ಸೃಷ್ಟಿಯಾಗುತ್ತದೆ. ಕೇಳಿದವರು ಅವರಿಗರಿವಿಲ್ಲದಂತೆ ಕಾವ್ಯರಸದಲ್ಲಿ ಮಿಂದು ಪುಳಕಿತರಾಗುತ್ತಾರೆ. ಇಂತಹ ಸಂದರ್ಭದಲ್ಲೇ ಮಹಾಕವಿ ಕುವೆಂಪು

> "ಹಾಡಿದನು ಗಮಕಿ
> ನಾಡು ನಲಿದುದು ರಸದ ಕಡಲಿನಲಿ ದುಮುಕಿ:"

ಎಂದು ಬರೆದಿರುವುದು. ಹಿಂದೆ ಈ ರೀತಿ ಕಾವ್ಯವಾಚನ ಮಾಡುವ ಸಂದರ್ಭದಲ್ಲೇ ಗಮಕಿಯಾದವನು ಆ ಪದ್ಯದ ಅರ್ಥವನ್ನೂ ಹೇಳುವ ಪರಿಪಾಠವಿದ್ದಿರಬೇಕು. ಕೇಳುಗರು ಕೇವಲ ನಾದ ಮಾಧುರ್ಯವನ್ನು ಸವಿಯುವ ಜೊತೆಯಲ್ಲೇ ಅಲ್ಲಿಯ ಅರ್ಥ ಶ್ರೀಮಂತಿಕೆಯನ್ನೂ ಅರ್ಥಮಾಡಿಕೊಳ್ಳಬೇಕು ಎಂಬುದು ಇದರ ಉದ್ದೇಶ. ಆದರೆ ಇತ್ತೀಚಿನ ವರ್ಷಗಳಲ್ಲಿ ಸಹೃದಯರಿಗೆ ಕಾವ್ಯಗಳ ಹೆಚ್ಚಿನ ಅರಿವನ್ನು ಉಂಟುಮಾಡಲು ನಮ್ಮ ನಾಡಿನಲ್ಲಿ ಕಾವ್ಯವಾಚನದೊಂದಿಗೆ ವ್ಯಾಖ್ಯಾನವನ್ನೂ ಇಟ್ಟುಕೊಂಡು, ವಾಚನ–ಪ್ರವಚನಗಳೆರಡನ್ನೂ ಜೊತೆ ಜೊತೆಯಾಗಿ ನಡೆಸುವ

**Corresponding Author:**
**ಡಾ. ಎಸ್. ಸಿದ್ದೇಗೌಡ**
ಕನ್ನಡ ಸಹ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು (ಸ್ವಾಯತ್ತ), ಮೈಸೂರು, ಕರ್ನಾಟಕ, ಭಾರತ

ಕಾರ್ಯಕ್ರಮವೂ ರೂಢಿಗೆ ಬಂದಿದೆ. ದೇಶಾದ್ಯಂತ ಹಲವೆಡೆಗಳಲ್ಲಿ ತಿಂಗಳುಗಟ್ಟಲೆ ಇಂತಹ ಕಾರ್ಯಕ್ರಮ ನಡೆಯುತ್ತಿದ್ದುದು ಸ್ವಾಗತಾರ್ಹವಾಗಿದೆ. ಗಮಕ ಕಲೆಯನ್ನು ಬಹಳ ಶ್ರದ್ಧಾಭಕ್ತಿಯಿಂದ ಉಳಿಸಿಕೊಂಡು ಬರುತ್ತಿರುವ ಮತ್ತೂರು–ಹೊಸಹಳ್ಳಿ ಗಮಕ ಕಲಾ ಪರಿಷತ್ತಿನವರು ಇಡೀ ಕುಮಾರವ್ಯಾಸ ಭಾರತವನ್ನು ವಾಚನ–ವ್ಯಾಖ್ಯಾನ ಮಾಡಿಸಿ, ಧ್ವನಿ ಮುದ್ರಣ ಮಾಡಿಸಿದ್ದಾರೆ. ಪ್ರಸಿದ್ಧ ಗಮಕಿಗಳಾದ ಶ್ರೀ ಎಚ್.ಆರ್. ಕೇಶವಮೂರ್ತಿ, ವಾಚನ ಮತ್ತು ಪ್ರವಚನ ಚಕ್ರವರ್ತಿ ಎಂದೇ ಹೆಸರಾದ ಶ್ರೀ ಲಕ್ಷ್ಮೀಕೇಶವ ಶಾಸ್ತ್ರಿಗಳ ಅಪೂರ್ವವಾದ ವ್ಯಾಖ್ಯಾನದೊಂದಿಗೆ ಗದುಗಿನ ಭಾರತ ಧ್ವನಿಮುದ್ರಣಗೊಂಡಿದೆ.

**ಗಮಕ ಕಾರ್ಯಕ್ರಮದಲ್ಲಿ ವ್ಯಾಖ್ಯಾನಕಾರನ ಅವಶ್ಯಕತೆ ಇದೆಯೇ?** ಎಂಬ ಪ್ರಶ್ನೆಯೂ ಅಲ್ಲಲ್ಲಿ ಕೇಳಿಬಂದಿದೆ. ವಾಚನದ ರಸಾನುಭವ ಕಾಲದಲ್ಲಿ ವ್ಯಾಖ್ಯಾನ ರಸಭಂಗವನ್ನುಂಟು ಮಾಡಬಹುದು ಎಂಬ ಹಿನ್ನೆಲೆಯಲ್ಲಿ ಈ ಮಾತು ಕೇಳಿ ಬಂದಿದೆ. ಆದರೆ ಗಾಯನದ ಸಮಯದಲ್ಲಿ ಕಾವ್ಯಗಳು ಇಂಪಾಗಿ ಕಿವಿಗೆ ಬಿದ್ದರೂ ಆಲೋಚನಾಪರವಾದ ಸಾಹಿತ್ಯ ಅರ್ಥವಾಗಲು ವಾಚನದೊಂದಿಗೆ ವ್ಯಾಖ್ಯಾನವೂ ಮುಖ್ಯ ಎಂಬುದು ಬಹು ಜನರ ಅಭಿಪ್ರಾಯ. ಕಾವ್ಯದ ರಸಭಾವಗಳನ್ನು ಶ್ರೋತೃಗಳು ಸಂಪೂರ್ಣವಾಗಿ ಆಸ್ವಾದಿಸುವಂತಾಗಲು ಕಾವ್ಯ ವಾಚನದ ಜೊತೆ ಜೊತೆಗೆ ಅದರ ವ್ಯಾಖ್ಯಾನ ಬೇಕು. ಗಮಕ ವಾಚನದಿಂದ ಹೇಗೆ ಕಾವ್ಯವನ್ನು ರಂಜನೀಯವಾಗಿಯೂ, ಹೃದ್ಯವಾಗಿಯೂ ಮಾಡಬಹುದೋ ಹಾಗೆಯೇ ವ್ಯಾಖ್ಯಾನದಿಂದಲೂ ಮಾಡಬಹುದು. ಗಮಕಿಯ ವಾಚನವನ್ನು ಕೇಳಿ ಸುಖಿಸಿದರಷ್ಟೇ ಸಾಲದು. ವ್ಯಾಖ್ಯಾನಕಾರನ ಚಾತುರ್ಯ, ವಾಕ್ ವೈಖರಿ, ಬಹುಶ್ರುತತ್ವವನ್ನೂ ಕೇಳುಗರು ಬಯಸುತ್ತಾರೆ ಎಂಬ ಮಾತುಗಳು ವ್ಯಾಖ್ಯಾನಕಾರನ ಅವಶ್ಯಕತೆಯನ್ನು ಹೇಳುತ್ತವೆ. ವ್ಯಾಖ್ಯಾನದ ಮೂಲಕ ಕಾವ್ಯಾರ್ಥವು ಹೆಚ್ಚು ಮಂದಿಯನ್ನು ತಲುಪಿ ರಂಜಿಸುತ್ತದೆ. ಪದ್ಯದ ಅಂತರಾರ್ಥ, ಪದ ಪ್ರಯೋಗದ ಸೊಗಸು, ಪ್ರಾಸಂಗಿಕ ಕಥಾ ಸಂದರ್ಭಗಳ ವಿವರಣೆ ಬಹಳಷ್ಟು ಸಂದರ್ಭಗಳಲ್ಲಿ ವ್ಯಾಖ್ಯಾನವಿಲ್ಲದೆ ತಿಳಿಯಲಾರದು. ಅದೂ ಅಲ್ಲದೆ ಗಮಕಿ ನಿರಂತರವಾಗಿ ಕಾವ್ಯವನ್ನು ವಾಚಿಸುತ್ತಾ ಹೋದರೆ ರಾಗತಾಳಗಳನ್ನು ಬದಲಾಯಿಸಿಕೊಳ್ಳಲು ಶ್ರಮವಾಗುತ್ತದೆ. ಪದ್ಯ ಪದ್ಯಗಳ ಮಧ್ಯೆ ವ್ಯಾಖ್ಯಾನಕಾರನ ವಿವರಣೆ ಇದ್ದಾಗ ಈ ಆಯಾಸದ ಪ್ರಶ್ನೆ ಬರುವುದಿಲ್ಲ ಮತ್ತು ಮುಂದಿನ ಪದ್ಯವನ್ನು ಅಷ್ಟೇ ಉತ್ಸಾಹದಿಂದ ವಾಚಿಸಲು ಅನುಕೂಲವಾಗುತ್ತದೆ. ಆದುದರಿಂದ ಕಾವ್ಯ ಗಾಯನಕ್ಕೆ ಒಬ್ಬ ಗಮಕಿ ಇದ್ದರೆ, ಅದರ ವ್ಯಾಖ್ಯಾನಕ್ಕೆ ಮತ್ತೊಬ್ಬ ವಿದ್ವಾಂಸ ಇರುವುದು ಕಾರ್ಯಕ್ರಮ ಯಶಸ್ವಿಯಾಗಲು ಸಹಾಯವಾಗುತ್ತದೆ.

**ಹಾಗಾದರೆ ವ್ಯಾಖ್ಯಾನಕಾರನಿಗಿರಬೇಕಾದ ಗುಣ ಲಕ್ಷಣಗಳೇನು?** ವ್ಯಾಖ್ಯಾನ ವಾಚಸ್ಪತಿ, ಪ್ರವಚನ ಚಕ್ರವರ್ತಿ ಮುಂತಾದ ಬಿರುದುಗಳಿಂದ ಕೂಡಿದ ಮಹಾನ್ ವ್ಯಾಖ್ಯಾನಕಾರರಾಗಿದ್ದ ಮತ್ತೂರು ಲಕ್ಷ್ಮೀಕೇಶವ ಶಾಸ್ತ್ರಿಗಳನ್ನು ಕುರಿತು "ವ್ಯಾಖ್ಯಾನಿಸುವಾಗ ಅವರೇ ಪಾತ್ರವಾಗಿ ಬಿಡುತ್ತಾರೆ. ಒಂದು ಪಾತ್ರದಿಂದ ಇನ್ನೊಂದು ಪಾತ್ರಕ್ಕೆ ಬರುವ ಹಾಗೆ ರಸಗಳನ್ನೇ ಬದಲಾವಣೆ ಮಾಡುವ ಕಲೆ ಇವರಿಗೆ ಸಿದ್ಧಿಸಿದೆ. ಆಯಾ ರಸದ ಪರಿಪೂರ್ಣತೆಯನ್ನು ತಮ್ಮ ಮಾತಿನ ಚಮತ್ಕಾರದಿಂದ, ಮುಖದ ಹಾವಭಾವಗಳಿಂದ, ಧ್ವನಿಯ ಏರಿಳಿತದಿಂದ ತೋರಿಸುವುದರಲ್ಲಿ ಇವರು ಅದ್ವಿತೀಯರು. ಇವರ ವ್ಯಾಖ್ಯಾನದಲ್ಲಿ ಕಣ್ಣು, ಕಿವಿ ಹಾಗೂ ಮಿದುಳು ಮೂರು ಎಚ್ಚರವಾಗಿದ್ದು ರಸಾಸ್ವಾದ ಮಾಡುತ್ತಿರುತ್ತವೆ. ಕೇಳುವ ಸಭಿಕರು ಮಂತ್ರ ಮುಗ್ಧರಾಗಿ ಬಿಡುತ್ತಾರೆ."[೨] ಎಂದು ಹೇಳಿರುವ ಮಾತು ಉತ್ತಮ ವ್ಯಾಖ್ಯಾನಕಾರನ ಗುಣ ಲಕ್ಷಣಗಳನ್ನು ಹೇಳುತ್ತವೆ.

ವ್ಯಾಖ್ಯಾನ ಎಂಬುದು ವಿವರಣೆ, ವಿಮರ್ಶೆ ಈ ಎರಡನ್ನೂ ಏಕಕಾಲಕ್ಕೆ ಸಾಧಿಸುತ್ತದೆ. ಕಲಿತವನೂ ಕಲಿಯದವನೂ ಒಟ್ಟಿಗೆ ತಲೆದೂಗುವಂತೆ ಮಾಡುತ್ತದೆ. ಆದರೆ ಇಂತಹ ವಾತಾವರಣ ನಿರ್ಮಾಣವಾಗಬೇಕಾದರೆ

1. ವ್ಯಾಖ್ಯಾನಕಾರ ಸಾಕಷ್ಟು ಅಧ್ಯಯನ ಮಾಡಿರಬೇಕು.
2. ವಿಷಯ ಸಂಗ್ರಹ ಮಾಡಿರಬೇಕು.
3. ಕನ್ನಡ ಕಾವ್ಯ ಪರಂಪರೆ ಅವನ ನೆನಪಿನಲ್ಲಿರಬೇಕು.
4. ವ್ಯಾಖ್ಯಾನಕಾರ ಸಾಹಿತ್ಯದಲ್ಲಿ ಸ್ವತಃ ಪರಿಶ್ರಮ ಹೊಂದಿದ್ದು, ಕವಿ ಹೃದಯವನ್ನರಿತು ಶ್ರೋತೃಗಳ ಮನೋಧರ್ಮಕ್ಕೆ ತಕ್ಕಂತಯೇ ತನ್ನ ವಾಗ್ಮಿತೆಯಿಂದ ಕಾವ್ಯದ ಸ್ವಾರಸ್ಯ, ಸಂದೇಶಗಳನ್ನು ಜನತೆಗೆ ತಲುಪಿಸುವ ಮಾಧ್ಯಮವಾಗಬೇಕು.

ಇಂದಿಗೂ ಸಹ ಎಷ್ಟೋ ಜನ ಹಳ್ಳಿಯ ಅನಕ್ಷರಸ್ಥರು ರಾಘವಾಂಕನ ಹರಿಶ್ಚಂದ್ರ ಕಾವ್ಯ, ನಾರಣಪ್ಪನ ಗದುಗಿನ ಭಾರತ, ಲಕ್ಷ್ಮೀಶನ ಜೈಮಿನಿ ಭಾರತ, ಕನಕದಾಸರ ನಳಚರಿತ್ರೆ ಮುಂತಾದ ಕಾವ್ಯಗಳನ್ನು ತಮ್ಮ ನೆನಪಿನಲ್ಲಿ ತುಂಬಿಟ್ಟುಕೊಳ್ಳಲು ಇಂತಹ ವ್ಯಾಖ್ಯಾನಕಾರರೇ ಕಾರಣ.

ಪ್ರತಿಯೊಬ್ಬ ಕವಿಯೂ ತಮ್ಮ ಕಾವ್ಯ ರಚನೆಗಳಲ್ಲಿ ವಿಶೇಷತೆಯನ್ನು ಮೆರೆಯುತ್ತಾರೆ. ಶೈಲಿಯಲ್ಲಿ, ಪದ ಪ್ರಯೋಗಗಳಲ್ಲಿ, ಕಾವ್ಯದ ಒಟ್ಟು ಆಶಯದಲ್ಲಿ ಭಿನ್ನತೆ ಇರುತ್ತದೆ. ಪಂಪನ ಹಿತಮಿತ ಮೃದುವಚನ, ರನ್ನನ ಶಕ್ತಿಯುತ ಶೈಲಿ, ರಾಘವಾಂಕನ ನಾಟಕೀಯತೆ, ಕುಮಾರವ್ಯಾಸನ ಕೃಷ್ಣಭಕ್ತಿ, ಲಕ್ಷ್ಮೀಶನ ಕಥಾ ನಿರೂಪಣೆ ಕಾವ್ಯವನ್ನು ಅಧ್ಯಯನ ಮಾಡಿದಾಗ ಎಲ್ಲರ ಅನುಭವಕ್ಕೆ ಬರುತ್ತದೆ. ಇದರ ಜೊತೆಗೆ ಮಹಾಕವಿಗಳು ಕನ್ನಡ, ಸಂಸ್ಕೃತ ಉಭಯ ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿದ ಅನಂತರವೇ ಕಾವ್ಯ ರಚನೆಗೆ ಕೈ ಹಾಕಿರುವುದು, ಅವರ ಕಾರಯಿತ್ರೀ ಪ್ರತಿಭೆ ಕಾವ್ಯದ ತುಂಬೆಲ್ಲಾ ಕೆಲಸ ಮಾಡಿರುತ್ತದೆ. ಇದನ್ನೆಲ್ಲಾ ಅರ್ಥೈಸಬೇಕಾದ ವ್ಯಾಖ್ಯಾನಕಾರ ಸತತ ಅಧ್ಯಯನ, ಅಭ್ಯಾಸವನ್ನು ಮಾಡಿರಬೇಕಾಗುತ್ತದೆ. ನಿಘಂಟಿನಲ್ಲಿ ನೋಡಿ ಪದಗಳಿಗೆ ಅರ್ಥ ತಿಳಿದುಕೊಂಡು ವ್ಯಾಖ್ಯಾನ ಮಾಡಲು ಸಿದ್ಧನಾಗುವುದು ಕವಿಗೆ ಮಾಡಿದ ಅಪಚಾರವಾಗುತ್ತದೆ.

ಗಮಕಿಯಾದವನು ತಾನು ವಾಚಿಸುತ್ತಿರುವ ಪದ್ಯದ ಸಂದರ್ಭ, ಅರ್ಥಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದರೆ ಅವನ ವಾಚನ ಅಷ್ಟೇ ಭಾವಪೂರ್ಣವಾಗಿರುತ್ತದೆ. ಆದರೆ ವ್ಯಾಖ್ಯಾನಕಾರನ ಜವಾಬ್ದಾರಿ ಇನ್ನೂ ಹೆಚ್ಚಿನದು. ಇಡೀ ಕಾವ್ಯ ಅವನ ಕಣ್ಮುಂದೆ ಇಲ್ಲದಿದ್ದರೆ ಸಮರ್ಥವಾಗಿ ಕವಿ ಕಾವ್ಯವನ್ನು ಜನರಿಗೆ ತಲುಪಿಸಲಾಗುವುದಿಲ್ಲ. ಕವಿ ಯಾವ ಕಾಲಕ್ಕೆ ಸೇರಿರಲಿ, ಸಾರ್ವಕಾಲಿಕವಾದ ಸತ್ಯವನ್ನು ಹೇಳಿರುತ್ತಾನೆ. ಮಾನವೀಯ ಮೌಲ್ಯಗಳು ಕಾವ್ಯದಲ್ಲಿ ಅಡಕವಾಗಿರುತ್ತವೆ. ವಿಶೇಷವಾಗಿ ಇವುಗಳನ್ನೆಲ್ಲಾ ಹೇಳಿದಾಗಲೇ ಎಷ್ಟೋ ಜನ ಸಭಿಕರಿಗೆ ತಾವು ಗುರುತಿಸದ ವಿಷಯಗಳನ್ನು ವ್ಯಾಖ್ಯಾನಕಾರರು ಹೇಳಿದರಲ್ಲಾ ಎಂಬ ಸಂತೋಷವುಂಟಾಗುತ್ತದೆ. ಉದಾಹರಣೆಗೆ ಪಂಪಭಾರತದಲ್ಲಿ ಹಿರಿಯರಾದ ಭಿಷ್ಮರು ಸೇನಾಧಿಪತ್ಯವನ್ನು ವಹಿಸಿಕೊಳ್ಳುವ ಸಂದರ್ಭ. ತನಗೆ ದುರ್ಯೋಧನ ಪಟ್ಟ ಕಟ್ಟದೆ ಮುದುಕರಾದ ಭೀಷ್ಮರಿಗೆ ಪಟ್ಟ ಕಟ್ಟಿದನಲ್ಲಾ ಎಂಬ ಕೋಪದಿಂದ ಕರ್ಣ ಭೀಷ್ಮರನ್ನು ಹೀಗಳೆದು ಮಾತನಾಡುತ್ತಾನೆ. ಆಗ ಭೀಷ್ಮರು ಕುರುಕ್ಷೇತ್ರ ಯುದ್ಧ ಎಷ್ಟು ಅಸಾಮಾನ್ಯವಾದುದು ಎಂದು ಹೇಳುತ್ತಾ 'ಸೂಟ್ಪಡೆಯಲಪ್ಪುದು ಕಾಣಾ ಮಾಹಾಜಿರಂಗದೊಳ್' ಎನ್ನುತ್ತಾರೆ. ನಿನ್ನ ಸರದಿಯೂ ಬರುತ್ತದೆ, ಅಲ್ಲಿಯವರೆಗೆ ಕಾಯಬೇಕು ಎಂಬುದು ಇದರ

ವಾಚ್ಯಾರ್ಥ. ಆದರೆ ಈ ಮಾತಿನ ಮೂಲಕ ಕುರುಕ್ಷೇತ್ರ ಯುದ್ಧದ ಫಲಿತಾಂಶವನ್ನೇ ಭೀಷ್ಮರು ಹೇಳುತ್ತಿದ್ದಾರೆ. ಅರ್ಜುನ, ಶ್ರೀಕೃಷ್ಣ ಇರುವ ಪ್ರತಿ ಪಕ್ಷವನ್ನು ಗೆಲ್ಲುವುದು ನಮಗ್ಯಾರಿಗೂ ಅಸಾಧ್ಯ ಎಂಬುದು ಧ್ವನ್ಯಾರ್ಥ. ಕಾವ್ಯದ ತುಂಬೆಲ್ಲಾ ಇಂತಹ ಮಾತುಗಳು ಬರುತ್ತವೆ. ವ್ಯಾಖ್ಯಾನಕಾರನಾದವನು ಸೂಚ್ಯವಾಗಿಯಾದರೂ ಈ ವಿವರಣೆಯನ್ನು ಕೊಡಬೇಕು. ಗದುಗಿನ ಭಾರತದಲ್ಲಿ ಕೀಚಕನ ಉಪಟಳದಿಂದ ನೊಂದ ದ್ರೌಪದಿ ಭೀಮನೊಡನೆ 'ಗಂಡರೈವರು ಮೂರು ಲೋಕದ ಗಂಡರು' ಎಂಬಲ್ಲಿ 'ಗಂಡರು' ಎಂಬ ಪದಕ್ಕಿರುವ ವ್ಯಂಗ್ಯ, ಕೋಪದ ಮೊನಚನ್ನು ಗಮನಿಸಬೇಕು. ತನ್ನ ದುಸ್ಥಿತಿಯನ್ನು ಹೊರಗೆಡಹುತ್ತಾ 'ವಿರಾಟನ ವನಿತೆಯರುಗಳ ಮುಡಿಯ ಕಟ್ಟುವ, ತನುವ ತಿರುಗುವ, ಕಾಲನೊತ್ತುವ ಕೆಲಸದುತ್ಸಾಹ' ಎಂಬಲ್ಲಿ 'ಕೆಲಸದುತ್ಸಾಹ' ಎಂಬ ಪದ ಪ್ರಯೋಗ ಉಂಟುಮಾಡುವ ಅರ್ಥಪರಂಪರೆ ಓದುಗರ ಗಮನಕ್ಕೆ ಬಂದಾಗಲೇ ಆ ಮಹಾಕವಿಯ ಪ್ರತಿಭಾ ಶಕ್ತಿಯ ಬಗ್ಗೆ ಹೆಮ್ಮೆ ಮೂಡಲು ಸಾಧ್ಯ.

ರಾಮಾಯಣ, ಮಹಾಭಾರತಗಳು ಕೇವಲು ರಸವತ್ತಾದ ಕಾವ್ಯಗಳು ಮಾತ್ರವಲ್ಲ, ಲೌಕಿಕ, ಆಧ್ಯಾತ್ಮಿಕ ಅರ್ಥಗಳನ್ನು ಒಳಗೊಂಡಿರುತ್ತದೆ. ಅರ್ಥವತ್ತಾಗಿ ಓದಿ ಅದರ ಮಥಿತಾರ್ಥವನ್ನು ವ್ಯಾಖ್ಯಾನಿಸಿ, ವಿವರಿಸಿ, ವಿಸ್ತರಿಸಿದಾಗ ಕಾವ್ಯಭಾಗ ಅರ್ಥಪೂರ್ಣವೆನಿಸುತ್ತದೆ. ಕಥೆ, ಉಪಕಥೆ, ದೃಷ್ಟಾಂತ, ಉಪಮಾನಗಳೊಂದಿಗೆ ಸ್ಪಷ್ಟೀಕರಿಸಿದಾಗ ಕಾವ್ಯದಲ್ಲಿ ಹುದುಗಿರುವ ರಹಸ್ಯವೆಲ್ಲಾ ಹೊರಗೆ ಬರುತ್ತದೆ. ಉಚಿತವಾದ ಕಡೆಗಳಲ್ಲಿ ಮಿತವೂ, ಗಂಭೀರವೂ ಆದ ಹಾಸ್ಯದ ಲೇಪನವಿದ್ದರೆ ಕೇಳುಗರ ಲವಲವಿಕೆ ಹೆಚ್ಚುತ್ತದೆ. ಹೀಗೆ ಹೇಳಿದ ಮಾತ್ರಕ್ಕೆ ವ್ಯಾಖ್ಯಾನವೇ ಅಧಿಕವಾಗಿ ವಾಚನಕಾರರಿಗೆ ಕಿರಿ ಕಿರಿಯಾಗುವ ಸಂದರ್ಭ ಬರಬಾರದು. ವ್ಯಾಖ್ಯಾನಕಾರನು ತನ್ನ ಪಾಂಡಿತ್ಯ ಪ್ರದರ್ಶನಕ್ಕೆ ಇದನ್ನು ವೇದಿಕೆಯಾಗಿ ಮಾಡಿಕೊಂಡು ದೀರ್ಘ ಉಪನ್ಯಾಸ ಕೊಡಬಾರದು.

ವ್ಯಾಖ್ಯಾನಕಾರನಿಗೂ, ವಾಚನಕಾರನಿಗೂ ಹೊಂದಾಣಿಕೆ ಇರಬೇಕು. ಪ್ರತಿ ಪದ್ಯದ ವ್ಯಾಖ್ಯಾನದ ಮುಕ್ತಾಯವು ಸರಿಯಾಗಿ ಮುಂದಿನ ಪದ್ಯದ ಪ್ರಾರಂಭದ ಸೂಚನೆಯಂತಿದ್ದರೆ ವಾಚನಕಾರನಿಗೆ ಸುಲಭವಾಗುತ್ತದೆ. ವ್ಯಾಖ್ಯಾನಕಾರನು ಸಭಿಕರನ್ನು ಗಮನಿಸಿ ತನ್ನ ವಿವರಣೆಯನ್ನು ಕೆಲವು ಸಂದರ್ಭಗಳಲ್ಲಿ ಕೊಡಬೇಕಾಗುತ್ತದೆ. ಶಾಲಾ ಮಕ್ಕಳ ಮುಂದೆ, ಹಳ್ಳಿಯ ಅನಕ್ಷರಸ್ಥರ ಮುಂದೆ ಗಮಕ ಕಾರ್ಯಕ್ರಮ ನಡೆಯುತ್ತಿದ್ದರೆ ಸರಳವಾದ ಮತ್ತು ಅವರಿಗೆ ಅರ್ಥವಾಗುವ ಭಾಷೆಯಲ್ಲಿ ಸನ್ನಿವೇಶವನ್ನು ವಿವರಿಸುವುದು ಉಚಿತ. ಅದೇ ಜ್ಞಾನಿಗಳು, ಕಾವ್ಯ ಪರಿಚಯವನ್ನು ಹೊಂದಿರುವವರ ಮುಂದೆ ಪ್ರೌಢವಾದ ರೀತಿಯಲ್ಲಿ ವ್ಯಾಖ್ಯಾನಿಸಬಹುದು. ಒಂದು ಸನ್ನಿವೇಶದಲ್ಲಿ ಬರುವ ಪಾತ್ರಗಳು, ಮಾತುಗಳು, ವಿಚಾರಗಳು ರಸಪುಷ್ಟಿಗೆ ಹೇಗೆ ಪೂರಕವಾಗಿವೆ? ಕವಿ ಇದನ್ನು ಚಿತ್ರಿಸುವಾಗ ಯಾರಿಂದ ಸ್ಫೂರ್ತಿ ಪಡೆದಿದ್ದಾನೆ? ಕವಿಯ ಸ್ಥಾನ ನಿರ್ದೇಶನ ಇತ್ಯಾದಿಗಳನ್ನೆಲ್ಲ ತರಬಹುದು.

ಹೀಗೆ ಗಮಕಿ ಮತ್ತು ವ್ಯಾಖ್ಯಾನಕಾರ ಒಂದೇ ನಾಣ್ಯದ ಎರಡು ಮುಖಗಳಾಗಿದ್ದು, ಔಚಿತ್ಯ ಪೂರ್ಣವಾಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟರೆ ಜನತೆಯ ಮನದಾಳದಲ್ಲಿ ಕವಿ, ಕಾವ್ಯಗಳು ಭದ್ರವಾಗಿ ನೆಲೆಯೂರುವುದರಲ್ಲಿ ಸಂಶಯವಿಲ್ಲ.

## ಪರಾಮರ್ಶನ ಗ್ರಂಥಗಳು

1. ವಿಕಿಸೋರ್ಸ್: ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ/ ಗಮಕ ಕಲೆ
2. ಕುವೆಂಪು: ಪಕ್ಷಿಕಾಶಿ, ಉದಯರವಿ ಪ್ರಕಾಶನ, ಮೈಸೂರು, ಹತ್ತನೆಯ ಮುದ್ರಣ 2018
3. ರಾಘವೇಂದ್ರರಾವ್ ಎಂ. (ಸಂ): ಗಮಕ ಕಲೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಎರಡನೆಯ ಮುದ್ರಣ, 1984
4. ಜಯರಾಮ್‌ರಾವ್ ಎಂ.ಎ.: ಗಮಕ ದಿಗ್ಗಜಗಳು, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು, 1998

[i] ಕುವೆಂಪು – ಪಕ್ಷಿಕಾಶಿ, ಪು.ಸಂ. 66

[ii] ಎಂ.ಎ. ಜಯರಾಮ್‌ರಾವ್ – ಗಮಕ ದಿಗ್ಗಜಗಳು, ಪು.ಸಂ. 75